ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ–583101**

**OFFICE OF THE DEPUTY COMMISSIONER, BELLARY DISTRICT, BELLARY-583101**

Telephone : 08392-277100. Fax : 08392-272538 Email: dcbellary@gmail.com

ನಂ.ಕಂ.ಸಿಬ್ಬಂದಿ.2/100/2017–18 ದಿನಾಂಕ: 4 –2–2019

# : : ಅಧಿಕೃತ ಜ್ಞಾಪನಾ : :

ವಿಷಯ:ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 29 ಹಾಗೂ ಸ್ಥಳಿಯೇತರ ವೃಂದದಲ್ಲಿ ಖಾಲಿ ಇರುವ 09 ಒಟ್ಟು 38 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಮೂಲ ದಾಖಲಾತಿ ಸಲ್ಲಿಸದ 07 ಅಭ್ಯರ್ಥಿಗಳನ್ನು ಕೈಬಿಟ್ಟು ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿರುವ 07 ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:1.ಈ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ ಸಂ/ಕಂ/ಸಿಬ್ಬಂದಿ–2/100/2017–18 ದಿನಾಂಕ:24.03.2018 ಹಾಗೂ ತಿದ್ದುಪಡಿ ಅಧಿಸೂಚನೆ ದಿ:9–7–2018 & 16.8.2018 & 16–11–2018.

2. ಈ ಕಾರ್ಯಾಲಯದ .ಪತ್ರ.ಸಂಖ್ಯೆ:ಕಂ.ಸಿಬ್ಬಂದಿ.2.100.2017–18ದಿನಾಂಕ:24–12–2018.

*******

ಈ ಕಾರ್ಯಾಲಯದ ಉಲ್ಲೇಖಿತ ಅಧಿಸೂಚನೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 29 ಹಾಗೂ ಸ್ಥಳೀಯೇತರ ವೃಂದಲ್ಲಿ ಖಾಲಿ ಇರುವ 09 ಒಟ್ಟು 38 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಚುರ ಪಡಿಸಲಾಗಿರುತ್ತದೆ.

ಅಂತಿಮವಾಗಿ ಆಯ್ಕೆಯಾದ 38 ಅಭ್ಯರ್ಥಿಗಳ ಪೈಕಿ 31 ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ದಿನಾಂಕ:10–12–2018ರಂದು ಪಡೆಯಲಾಗಿ ಬಾಕಿ ಉಳಿದ 7 ಅಭ್ಯರ್ಥಿಗಳ ಪೈಕಿ ಸ್ಥಳೀಯ ವೃಂದದಲ್ಲಿ 06 ಅಭ್ಯರ್ಥಿಗಳು ಮತ್ತು ಸ್ಥಳೀಯೇತರ ವೃಂದದಲ್ಲಿ 01 ಅಭ್ಯರ್ಥಿಯು ತಮ್ಮ ಮೂಲ ದಾಖಲೆಗಳನ್ನು ಸಲ್ಲಿಸದೇ ಗೈರು ಹಾಜರಾಗಿರುತ್ತಾರೆ. ಕಾರಣ ಗೈರುಹಾಜರಾದ 07 ಅಭ್ಯರ್ಥಿಗಳು ಬೇರೆ ಜಿಲ್ಲೆಯಲ್ಲಿ ನೇಮಕಾತಿ ಹೊಂದಿರುವುದರಿಂದ, ಶಿಕ್ಷಣಕ್ಕಾಗಿ ಮತ್ತು ಇತರೆ ಕಾರಣಗಳಿಂದ ಬಳ್ಳಾರಿ ಜಿಲ್ಲೆಗೆ ಸೇರಲು ಆಸಕ್ತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಕಾರಣ ಸದ್ರಿಯವರಿಗೆ ಈ ಕಛೇರಿ ಪತ್ರ ದಿನಾಂಕ:24–12–2018ರಂದು ನೋಟೀಸ್ ನೀಡಿ ಮೂಲ ದಾಖಲೆಗಳನ್ನು ಹಾಜರುಪಡಿಸಲು ದಿನಾಂಕ:31–12–2018ರವರೆಗೆ ಕೊನೆಯ ಕಾಲಾವಕಾಶ ನೀಡಿ, ನಿಗದಿತ ಅವಧಿಯಲ್ಲಿ ಮೂಲ ದಾಖಲೆಗಳನ್ನು ಹಾಜರುಪಡಿಸದೇ ಇದ್ದ ಪಕ್ಷದಲ್ಲಿ ಪರಿಭಾವಿತ ಆಸಕ್ತಿ ಇಲ್ಲವೆಂದು ಭಾವಿಸಿ ಆಯ್ಕೆ ಪಟ್ಟಿಯಿಂದ ಕೈಬಿಟ್ಟು ಹೆಚ್ಚುವರಿ ಆಯ್ಕೆಪಟ್ಟಿಯಿಂದ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು ಹಾಗೂ ಒಂದು ವೇಳೆ ಗ್ರಾಮಲೆಕ್ಕಿಗರ ಹುದ್ದೆಗೆ ಸೇರಲು ಆಸಕ್ತಿ ಇಲ್ಲದ ಪಕ್ಷದಲ್ಲಿ ತಾವು ನೇರವಾಗಿ ಕಛೇರಿಗೆ ಬಂದು ಅಥವಾ ಇ–ಮೇಲ್ ಐಡಿ dcbellary@gmail.comಗೆ ಮೇಲ್ ಮೂಲಕ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.ಆದಾಗ್ಯೂ ಏಳು (07) ಅಭ್ಯರ್ಥಿಗಳ ಪೈಕಿ ಎರಡು(02) ಅಭ್ಯರ್ಥಿಗಳು ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ ಮತ್ತು ಉಳಿದ ಐದು(05) ಅಭ್ಯರ್ಥಿಗಳು ಲಿಖಿತ ಮತ್ತು ಇ–ಮೇಲ್ ಮೂಲಕ ಬಳ್ಳಾರಿ ಜಿಲ್ಲೆ ಗ್ರಾಮಲೆಕ್ಕಿಗರ ಹುದ್ದೆಗೆ ಸೇರಲು ಆಸಕ್ತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಕಾರಣ ಗೈರು ಹಾಜರಾದ 07 ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಟ್ಟು ಇವರ ಬದಲಾಗಿ ನಿರೀಕ್ಷಣಾ ಪಟ್ಟಿಯಿಂದ ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ಈ ಕೆಳಕಂಡ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ.

| Sl No | Waiting List Rank | Local/Non Local | ref_no | Waiting List Selected cand_name | sel_cat | sel_res |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | 5 | Non Local | 204259 | DEEPA K D/o KENCHAPPA KALAGILAVADA AT POST HARAPANAHALLI TQ BALLARI DISTRICT | SC | W |
| 2 | 6 | Local | 204027 | ABHISHEK L 21ST WARD DR. BR. AMBEDKAR COLONY, LAKSHMIPURA SANDUR, BALLARI DISTRICT | GM | O |

| Sl No | Waiting List Rank | Local/Non Local | ref_no | Waiting List Selected cand_name | sel_cat | sel_res |
|---|---|---|---|---|---|---|
| 1 | 2 | 3 | 4 | 5 | 6 | 7 |
| 3 | 3 | Local | 211875 | KOTRESHA UPPARA S/O UPPARA GONEPPA, HARALU AT AND HARALU POST KOTTUR TQ BALLARI DISTRICT | GM | R |
| 4 | 11 | Local | 201875 | MANJUNATH S/o SURYAKANT PUJARI, MADIYAL TALUK ALAND GULBARGA | GM | H |
| 5 | 15 | Local | 204634 | MEINPADI DEEPA D/O MEINPADI MURTHEPPA, BATHANAHALLI AT K GAJAPURA POST KUDLIGI TQ BALLARI DISTRICT | SC | W |
| 6 | 17 | Local | 214054 | KIRAN S/O SHANKRAPPA, AT MINCHERI TANDA 1 POST KALAPUR TQ LINGASUGUR, RAICHUR DISTRICT | SC | R |
| 7 | 18 | Local | 213969 | RAJKUMAR S/o SAIDAPPA, AT POST EKLOOR TQ BASAVAKALYAN, DIST BIDAR | SC | K |

ಕಾರಣ ಮೇಲ್ಕಂಡಂತೆ ನಿರೀಕ್ಷಣಾ ಪಟ್ಟಿಯ ಮೀಸಲಾತಿಯಂತೆ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ:13.2.2019 ರಂದು ಬೆಳಿಗೆ 10-00 ರಿಂದ ಸಾಯಂಕಾಲ 5-30 ರ ಒಳಗಾಗಿ ಈ ಕೆಳಕಂಡ ಮೂಲ (Original Documents) ದಾಖಲಾತಿಗಳನ್ನು ಪರಿಶೀಲನೆಗೆ ಖುದ್ದಾಗಿ ಬಳ್ಳಾರಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಿಬ್ಬಂದಿ ಶಾಖೆಗೆ ಹಾಜರುಪಡಿಸತಕ್ಕದ್ದು.

1) ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಮೂಲ ಅಂಕಪಟ್ಟಿ.
2) ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಮೂಲ ಪ್ರತಿಗಳು.
3) ಇತ್ತೀಚಿನ (2) ಭಾವ ಚಿತ್ರಗಳು.
4) ಗ್ರಾಮೀಣ ಮೀಸಲಾತಿ ಮೂಲ ಪ್ರಮಾಣ ಪತ್ರ (ಗ್ರಾಮೀಣ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ).
5) ಕನ್ನಡ ಮಾಧ್ಯಮ ಪ್ರಮಾಣ ಪತ್ರ (ಕನ್ನಡ ಮಾಧ್ಯಮ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ).
6) ಸೇನೆಯಿಂದ ಬಿಡುಗಡೆ ಹೊಂದಿದ ಪ್ರಮಾಣ ಪತ್ರ (ಪುಸ್ತಕ) (ಮಾಜಿ ಸೈನಿಕ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ).
7) ಅಂಗವಿಕಲ ಪ್ರಮಾಣ ಪತ್ರ (ಅಂಗವಿಕಲ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ).
8) 371ಜೆ ಅನುಬಂಧ-ಎ ಅರ್ಹತಾ ಮೂಲ ಪ್ರಮಾಣ ಪತ್ರ ಸಲ್ಲಿಸುವುದು(371ಜೆ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ).
9) ಯೋಜನಾ ನಿರಾಶ್ರಿತರ ಮೂಲ ಪ್ರಮಾಣ ಪತ್ರ ಸಲ್ಲಿಸುವುದು (ಯೋಜನಾ ನಿರಾಶ್ರಿತರ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ).
10) ನಿಗದಿತ ನಮೂನೆಯಲ್ಲಿ ರೂ.50/- ಬಾಂಡ್ ಪೇಪರ್ ಮೇಲೆ ಮುಚ್ಚಳಿಕೆ ಪತ್ರ ಮತು ಅರ್ಜಿ ಸಲ್ಲಿಸುವಾಗ ನಮೂದಿಸಲಾದ ಎಲ್ಲಾ ದಾಖಲೆಗಳ ವಿವರ.
11) ಅಂಗವಿಕಲ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ದೈಹಿಕ ಪರೀಕ್ಷೆಗೆ ಒಳಪಡಿಸುವ ಷರತ್ತಿಗೊಳಪಟ್ಟು ನೇಮಕಾತಿ ಆದೇಶ ನೀಡಲಾಗುವುದು (ದಿನಾಂಕ:13-2-2019ರಂದು ಬೆಳಿಗ್ಗೆ 10.00ಗಂಟೆಗೆ ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಅನಂತಪುರ ರಸ್ತೆ ಬಳ್ಳಾರಿ ಇವರಲ್ಲಿ ಹಾಜರಾಗಲು ಸೂಚಿಸಿದೆ).

04/02/19.

(ಡಾ॥ ರಾಮ್ ಪ್ರಸಾತ್ ಮನೋಹರ್) ಭಾ.ಆ.ಸೇ
ಅಧ್ಯಕ್ಷರು
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಬಳ್ಳಾರಿ

ಗೆ,
ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ.
ಪ್ರತಿಯನ್ನು ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಅನಂತಪುರ ರಸ್ತೆ ಬಳ್ಳಾರಿ ಇವರಿಗೆ ಮಾಹಿತಿಗಾಗಿ ಮತ್ತು ಅಂಗವಿಕಲರನ್ನು ವೈದ್ಯಕೀಯ ಮಂಡಳಿಯಲ್ಲಿ ದಿ:13-2-2019ರಂದು ಪರೀಕ್ಷಿಸಿ ವರದಿ ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.